## ಮಧ್ಯಂತರ ಅರ್ಜಿ ನಂ.9 ಮತ್ತು 10 ರ ಮೇಲೆ ಆದೇಶ

**1.** ಅರ್ಜಿದಾರ/ವಾದಿ ಪರ ಪರ ಪ್ರಸ್ತುತ ಅರ್ಜಿಗಳನ್ನು ಸಲ್ಲಿಸಿ ದಾಖಲೆಗಳನ್ನು ಹಾಜರುಪಡಿಸಲು ಹಾಗೂ ಅವುಗಳ ಮೇಲೆ ಪಿಡಬ್ಲ್ಯೂ-1 ರವರ ಮುಂದುವರೆದ ಸಾಕ್ಷಿ ಮಾಡಿಸಲು ಪ್ರಸ್ತುತ ಅರ್ಜಿಗಳಲ್ಲಿ ಮಾಗಣಿ ಮಾಡಿರುತ್ತಾರೆ.

**2.** ಸದರಿ ಅರ್ಜಿಗಳ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ದಾವಾಸ್ತಿಗಳ ಕುರಿತಾಗಿ ವಾದಿ ಕೇಳಿದ ಪಾಲುವಾಟ್ನೆ ದಾವೆಯಲ್ಲಿ ವಾದಿಯ ಸ್ವಯಾರ್ಜಿತ ಆಸ್ತಿಯಲ್ಲೂ ಸಹ ಪಾಲುವಾಟ್ನೆಯಾಗಬೇಕೆಂದು 3 ಮತ್ತು 6 ನೇ ಪ್ರತಿವಾದಿಯರು ಮರುಮಾಗಣಿ ಮಾಡಿರುತ್ತಾರೆ. ಅದಕ್ಕೆ ಈಗಾಗಲೇ ತಕರಾರು ಸಲ್ಲಿಸಲಾಗಿದೆ. ಸದರಿ ಮರು ಮಾಗಣಿಯಲ್ಲಿ ಕೇಳಿದ ಆಸ್ತಿ ವಾದಿಯ ಸ್ವಯಾರ್ಜಿತ ಆಸ್ತಿ ಇದೆ ಎಂದು ತೋರಿಸಲು ಇರುವ ಪೂರಕ ದಾಖಲೆಗಳನ್ನು ಹಾಜರುಪಡಿಸುವುದು ಅತೀ ಅವಶ್ಯವಿರುತ್ತದೆ. ಕಾರಣ ದಾಖಲೆಗಳನ್ನು ಹಾಜರುಪಡಿಸಿ ಅವುಗಳನ್ನು ಪಿಡಬ್ಲ್ಯೂ -1 ರವರ ಮುಂದುವರೆದ ಸಾಕ್ಷ್ಯದಲ್ಲಿ ನಿಶಾನೆಗೊಳಿಸಿಕೊಂಡು ಸಾಕ್ಷಿ ಮಾಡಿಸಲು ಅನುಮತಿ ನೀಡಬೇಕೆಂದು ವಿನಂತಿಸಿರುತ್ತಾರೆ.

**3.** ಸದರಿ ಅರ್ಜಿಗೆ ಪ್ರತಿವಾದಿಯರ ಪರ ತಕರಾರು ಸಲ್ಲಿಸಿ ಹಾಜರುಪಡಿಸಲು ಇಚ್ಚಿಸಿದ ದಾಖಲೆಗಳು ದಾವೆ ನಿರ್ಧರಿಸಲು ಮಹತ್ವದ

ದಾಖಲೆಗಳಾಗಿರುವುದಿಲ್ಲ. ಸದರಿ ದಾಖಲೆಗಳು ವಾದಿಯ ಸುಪರ್ದಿಯಲ್ಲಿದ್ದರೂ ಸಹ ಅವುಗಳನ್ನು ಈ ಮೊದಲು ಹಾಜರುಪಡಿಸದೇ ದಾವೆಯಲ್ಲಿ ತಾನು ತಳೆದ ನಿಲುವಿನ ಕೊರತೆ ನೀಗಿಸಲು ಈ ಹಂತದಲ್ಲಿ ದಾಖಲೆಗಳನ್ನು ಹಾಜರುಪಡಿಸಲು ಪ್ರಯತ್ನಿಸುತ್ತಿದ್ದಾನೆ. ಕಾರಣ ಅರ್ಜಿಗಳನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

**4.** ಅರ್ಜಿಗಳ ಮೇಲೆ ಸುನಾವಣೆ ಆಲಿಸಿದ ನಂತರ, ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ........

**ಅಂಶಗಳು**

1. ಮಧ್ಯಂತರ ಅರ್ಜಿ ನಂ. 9 ಮತ್ತು 10 ರಲ್ಲಿ ಕೇಳಿದ ಪರಿಹಾರಗಳನ್ನು ಪಡೆಯಲು ವಾದಿ ಅರ್ಹರಿರುತ್ತಾರೆಯೇ?
2. ಯಾವ ಆದೇಶ ?

**5.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

6. **ಅಂಶ ನಂ.1** :- ದಾವಾಸ್ತಿಗಳಲ್ಲಿ ಪಾಲುವಾಟ್ನಿ ಹಾಗೂ ಪ್ರತ್ಯಕ್ಷ ಕಬ್ಜೆ ಕೇಳಿ ವಾದಿ ದಾವೆ ಸಲ್ಲಿಸಿರುತ್ತಾರೆ. ಡಿಡಬ್ಲ್ಯೂ -1 ರವರ ಸಾಕ್ಷಿ ಮುಕ್ತಾಯಗೊಂಡು ಅವರ ಪರ ಮುಂದುವರೆದ ಸಾಕ್ಷಿಗಾಗಿ ಪ್ರಕರಣ ನೇಮಿಸಿದಾಗ ಪ್ರಸ್ತುತ ಅರ್ಜಿಗಳನ್ನು ಸಲ್ಲಿಸಲಾಗಿದೆ. ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ-18 ನಿಯಮ -17 ರಡಿಯಲ್ಲಿ ದಾವೆಯ ಯಾವುದೇ ಹಂತದಲ್ಲಿ ಸಾಕ್ಷಿದಾರರನ್ನು ಕರೆದು ಆತನಿಗೆ ನ್ಯಾಯಾಲಯವು ಸಾಕ್ಷ್ಯದ ಕಾನೂನಿಗೆ ಒಳಪಟ್ಟು ಆಲೋಚಿಸುವಂತಹ ಪ್ರಶ್ನೆಗಳನ್ನು ಕೇಳಲು, ವಿಚಾರಣೆ ಮಾಡಲು ಯಾವುದೇ ಸಾಕ್ಷಿದಾರರನ್ನು ಪುನಃ ಕರೆಸಲು ಅವಕಾಶವಿರುತ್ತದೆ.

7. ಅದರಂತೆ ಪಕ್ಷಗಾರರು ದಾವೆಯಲ್ಲಿ ನೀಡಲು ಇಚ್ಛಿಸಿದ ದಾಖಲೆಗಳು ವಾದ-ಪ್ರತಿವಾದಪತ್ರದ ಜೊತೆಗೆ ನೀಡತಕ್ಕದ್ದು. ಒಂದು ವೇಳೆ ತದನಂತರದಲ್ಲಿ ನೀಡಲು ಇಚ್ಛಿಸಿದರೆ ನ್ಯಾಯಾಲಯವು ಅನುಮತಿ ಮೇರೆಗೆ ಅಲ್ಲದೇ ಸಲ್ಲಿಸಿದ ದಾಖಲೆಗಳನ್ನು ಸಾಕ್ಷಿ ಎಂದು ಪರಿಗಣಿಸಲಾಗದೆಂದು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ -7 ನಿಯಮ -14(2) ರಡಿಯಲ್ಲಿ ಸ್ಪಷ್ಟಪಡಿಸುತ್ತದೆ.

8. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅರ್ಜಿಗಳಲ್ಲಿ ಕೇಳಿದ ಮಾಗಣೆ ಅವಲೋಕಿಸಿದಾಗ 3 ಮತ್ತು 6 ನೇ ಪ್ರತಿವಾದಿಯರ ಪರ ಸಲ್ಲಿಸಿದ ಮರು

ಮಾಗಣಿಯಲ್ಲಿ ಕೇಳಿದ ಆಸ್ತಿಗಳು ತನ್ನ ಸ್ವಯಾರ್ಜಿತ ಆಸ್ತಿಗಳಿರುತ್ತವೆ ಎಂದು ವಾದಿಯ ವಾದವಿರುತ್ತದೆ. ಸದರಿ ವಾದಿಯ ನಿಲುವಿಗೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸಲು ಆತ ಸ್ವತಂತ್ರನಿರುತ್ತಾನೆ. ಕಾರಣ ಕೇವಲ ತಡವಾಗಿ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಂದ ಮಾತ್ರಕ್ಕೆ ದಾವೆಯನ್ನು ಮುಂದೂಡುವ ಉದ್ದೇಶದಿಂದ ಅಥವಾ ಸಾಕ್ಷ್ಯಾಧಾರ ಮುಕ್ತಾಯದ ನಂತರ ಅವುಗಳನ್ನು ಹಾಜರುಪಡಿಸಿ ದುರ್ಲಾಭ ಪಡೆಯುವ ಉದ್ದೇಶ ಹೊಂದಿರುತ್ತಾರೆಂದು ಪರಿಗಣಿಸಲಾಗದು. ಸದರಿ ದಾಖಲೆಗಳ ಕುರಿತಾಗಿ 3 ಮತ್ತು 6 ನೇ ಪ್ರತಿವಾದಿಯರು ಪಿಡಬ್ಲ್ಯೂ–1 ರವರನ್ನು ಪಾಟೀಸವಾಲಿಗೆ ಒಳಪಡಿಸಲು ಅವಕಾಶವಿರುತ್ತದೆ. ಆದ್ದರಿಂದ ಅರ್ಜಿಗಳನ್ನು ತಡವಾಗಿ ಸಲ್ಲಿಸಿದ್ದಕ್ಕೆ ಅವುಗಳನ್ನು ಖರ್ಚು ಸಹಿತ ಪುರಸ್ಕರಿಸುವುದರಿಂದ ಪ್ರತಿವಾದಿಯರ ಹಿತವನ್ನು ಸಹ ಕಾಯ್ದುಂತಾಗುತ್ತದೆ. ಆದ್ದರಿಂದ ಅಂಶ ನಂ. 1 ಕ್ಕೆ **"ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

9. **ಅಂಶ ನಂ.2:** ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

## ಆದೇಶ

ಮಧ್ಯಂತರ ಅರ್ಜಿ ನಂ.9 ಮತ್ತು 10 ಗಳನ್ನು ರೂ. 500/- ಖರ್ಚಿನ ಮೇರೆಗೆ ಪುರಸ್ಕರಿಸಲಾಗಿದೆ.

ಪಿಡಬ್ಲ್ಯೂ-1 ರವರ ಮುಂದುವರೆದ ಸಾಕ್ಷಿಗಾಗಿ ಪ್ರಕರಣವನ್ನು ದಿಃ 11-12-2023 ರಂದು ಕರೆಯಿರಿ.

**Sd/-**

**ದಿವಾಣಿ ನ್ಯಾಯಾಧೀಶರು, ಅಂಕೋಲಾ**